**ದಿನಾಂಕಃ 13-04-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಆರ್ ವಿ ಆರ್ ವಕೀಲರಿಂದಃ**

3. ನಾನು ಸಂಸ್ಥೆ ಪರವಾಗಿ ಸಾಕ್ಷ್ಯ ನೀಡುತ್ತಿದ್ದೇನೆ. ಎದುರುದಾರ ಸಂಸ್ಥೆ ನನಗೆ ಈ ಕೇಸಿನಲ್ಲಿ ಪ್ರತಿನಿಧಿಸಲು ಅಧಿಕಾರ ಕೊಟ್ಟಿರುವ ಬಗ್ಗೆ ನಾನು ಯಾವುದೇ ಅಧಿಕಾರ ಪತ್ರ ಹಾಜರುಪಡಿಸಿಲ್ಲ ಎಂದರೆ ನನ್ನ ಬಳಿ ಇದೆ . ಅರ್ಜಿದಾರ ಸುಮಾರು 2002 ರಿಂದ ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ. ದಿನಾಂಕ 10.09.2015 ರಂದು ಸಂಸ್ಥೆಯಲ್ಲಿ ಗಲಾಟೆಯಾದ ಬಗ್ಗೆ ಪೊಲೀಸ್ ನವರಿಗೆ ದೂರನ್ನು ಕೊಟ್ಟಿಲ್ಲ. ದಿನಾಂಕ 10.09.2015 ರಂದು ಅರ್ಜಿದಾರ 2 ನೇ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದ. 2 ನೇ ಪಾಳಿ ಕೆಲಸ ಸುಮಾರು ರಾತ್ರಿ 12.00 ಗಂಟೆಗೆ ಮುಗಿಯುತ್ತದೆ . ಆ ದಿನ ಅರ್ಜಿದಾರ ಹೆಚ್ಚುವರಿ ಅವಧಿಯ (over time) ಕೆಲಸ ಮಾಡುತ್ತಿದ್ದ ಎಂದರೆ ಹೌದು . ಆ ದಿನ ಅರ್ಜಿದಾರ ಒಟ್ಟು 14 ತಾಸು ಕೆಲಸ ಮಾಡಿದ್ದಾನೆ ಎಂದರೆ ಹೌದು . ಅರ್ಜಿದಾರ ಮಾನಸಿಕವಾಗಿ ಅಸ್ವಸ್ಥ ಇದ್ದಾನೆ ಎಂದು ತೋರಿಸಲು ದಾಖಲಾತಿ ಇರುವುದಿಲ್ಲ. ಅರ್ಜಿದಾರನ ವಿರುದ್ಧ ಅಶಿಸ್ತಿನ ಆರೋಪದ ಪಟ್ಟಿ ನಕಲನ್ನು ಹಾಜರುಪಡಿಸಿದ್ದೇನೆ. ಆ ರೀತಿ ಆರೋಪಣಾ ಪಟ್ಟಿ ನಕಲನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಎಂ. 4 ಅನ್ನು ಅರ್ಜಿದಾರನಿಗೆ ಜಾರಿ ಮಾಡಿರುವ ಬಗ್ಗೆ ದಾಖಲಾತಿ ಇದೆಯಾ ಎಂದರೆ ಅರ್ಜಿದಾರ ಅದನ್ನು ತೆಗೆದುಕೊಂಡಿರುವುದಿಲ್ಲ. ಅರ್ಜಿದಾರ ಅದನ್ನು ಪಡೆಯಲು ನಿರಾಕರಿಸಿದ ಮೇಲೆ ನೋಂದಾಯಿಸಿದ ಅಂಚೆಯಲ್ಲಿ ಅದನ್ನು ಅರ್ಜಿದಾರನಿಗೆ ಕಳುಹಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅರ್ಜಿದಾರ ಪುನಃ ಬಂದಿದ್ದ ಆದರೆ ಆಗಲೂ ಅದನ್ನು ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ . ಅರ್ಜಿದಾರ ಅದನ್ನು ತೆಗೆದುಕೊಳ್ಳಲು ತಿರಸ್ಕರಿಸಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರನಿಗೆ ಅದನ್ನು ಜಾರಿ ಮಾಡದೇ ಅವನು ತಿರಸ್ಕರಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಎಂ.5 ಮೂರು ದಿನದ ಒಳಗಡೆ ಉತ್ತರಿಸಬೇಕು ಎಂದು ನೀಡಿದ್ದ ಅವಧಿಯೊಳಗೆ ಆದೇಶ ಮಾಡಲಾಗಿದೆ ಎಂದರೆ ಅದು ಕೊನೆಯ ದಿನ ಉತ್ತರ ಸಲ್ಲಿಸಲು ಆಗಿತ್ತು . ದಿನಾಂಕ 14.09.2015 ರಂದು ಅರ್ಜಿದಾರ ಬೆಳಿಗ್ಗೆ 7.46 ಕ್ಕೆ ಬಂದು ಸಂಜೆ 4.27 ರವರೆಗೆ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾನೆ ಎಂದರೆ ಅರ್ಜಿದಾರ ಬಂದಿದ್ದ ಆದರೆ ಆ ದಿನ ಕೆಲಸ ಮಾಡಿರುವುದಿಲ್ಲ. ಅರ್ಜಿದಾರನಿಗೆ ಕೆಲಸ ಮಾಡಲು ಗುರಿಯನ್ನು ನೀಡಲಾಗುತ್ತಿತ್ತು ಎಂದರೆ ಹೌದು . ಅದನ್ನು Daily product report ನಲ್ಲಿ

ಅರ್ಜಿದಾರ ತಾನು ಮಾಡಿದ ಕೆಲಸ ವಿವರವನ್ನು ಬರೆಯಬೇಕಿತ್ತು ಎಂದರೆ ಹೌದು . ಆ Daily product report ಅನ್ನು ಈ ಪ್ರಕರಣದಲ್ಲಿ ಸಂಸ್ಥೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕ 10.09.2015 ರಂದು ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನನ್ನು ಕೆಲಸದಿಂದ ಕಿತ್ತು ಹಾಕಬೇಕು ಎಂಬ ದುರುದ್ದೇಶದಿಂದ ನಿ.ಎಂ. 1 ರಿಂದ 3 ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿ.ಎಂ. 1 ರಿಂದ 3 ರ ಬಗ್ಗೆ ನಮ್ಮ ಸಂಸ್ಥೆಯಿಂದ ತನಿಖೆಯಾಗಿದೆ . ಆ ತನಿಖೆಯ ವರದಿಯನ್ನು ಈ ಕೇಸಿನಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನನ್ನು ಸಂಸ್ಥೆಯ ಒಳಗೆ ವಿಚಾರಣೆ / ತನಿಖೆಗೆ ಕರೆಯಿಸಿದ ಬಗ್ಗೆ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಎಂ. 3 ರಲ್ಲಿ ಸಾಕ್ಷಿದಾರರ ಮತ್ತು ಅರ್ಜಿದಾರರ ರುಜು ಇಲ್ಲ ಎಂದರೆ ಹೌದು . ಸಂಬಳ ಮತ್ತು ಭತ್ಯೆ ವಿಚಾರದಲ್ಲಿ ಅರ್ಜಿದಾರ ಕೇಳುತ್ತಿದ್ದ ಕಾರಣ ಅವನ ವಿರುದ್ಧ ಸುಳ್ಳು ಆರೋಪ ಮಾಡಿ ಕೆಲಸದಿಂದ ಕಿತ್ತು ಹಾಕಲಾಗಿದೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ 6 ನೇ ಕಂಡಿಕೆಯಲ್ಲಿ ಉಲ್ಲೇಖ ಮಾಡಿರುವುದನ್ನು ತಕರಾರಿನಲ್ಲಿ ಬರೆದಿಲ್ಲ ಎಂದರೆ ಹೌದು . ನಿ.ಎಂ. 6 ರಿಂದ 8 ಸೃಷ್ಟಿ ಮಾಡಿದ ದಾಖಲಾತಿ ಆಗಿವೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯಲ್ಲಿ ಯಾವುದೇ ಆಂತರಿಕ ತನಿಖೆ ಮಾಡಿಲ್ಲ ಮತ್ತು ಅರ್ಜಿದಾರನನ್ನು ಕೆಲಸದಿಂದ ತೆಗೆದುಹಾಕಲು ಯಾವುದೇ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅರ್ಜಿದಾರ ಅರ್ಜಿಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಿದ್ದಾನೆ ಎಂದರೆ ಸರಿಯಲ್ಲ. ದಿನಾಂಕ 19.09.2015 ರಂದು ಅರ್ಜಿದಾರ ನಮ್ಮ ಸಂಸ್ಥೆಗೆ ಒಂದು ತಿಳುವಳಿಕೆ ಪತ್ರ ಕಳುಹಿಸಿದ್ದ ಎಂದರೆ ಹೌದು . ಅದಕ್ಕೆ ನಮ್ಮ ಸಂಸ್ಥೆ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಉತ್ತರದ ಪ್ರತಿಯನ್ನು ಹಾಜರುಪಡಿಸಿಲ್ಲ ಮತ್ತು ಉತ್ತರ ನೀಡಿದ ಬಗ್ಗೆ ತಕರಾರಿನಲ್ಲಿ ಹಾಗೂ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಹೌದು .

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ